ಇದು ನಮ್ಮ ಜವಾಬ್ದಾರಿ ಇದೆ. ನನ್ನ ದೇಶದ ಹುಡುಗರ ಜವಾಬ್ದಾರಿಯನ್ನು ನೋಡಿಕೊಳ್ಳುವುದು ನಮ್ಮ ಕರ್ತವ್ಯ. ಈ ಬಗ್ಗೆ ನಿಮ್ಮ ಈ ಊರಿನವರು ಏನು ಮಾಡಬೇಕಾಗಿಲ್ಲ, ಎಂದು ಅಹಂಕಾರದಿಂದ ಹೇಳಿದರು ಎಂದು ಪೊಲೀಸ್ ಕಮಿಷನರ್ ಗರುಡಾಚಾರ್ ಅವರೇ ನನಗೆ ಹೇಳಿದರು. ಆದ್ದರಿಂದ ಈ ಬಗ್ಗೆ ಈ ಪಟ್ಟಣದಲ್ಲಿ ಸಮಸ್ಯೆ ಬಗೆಹರಿಯಲಾರದೆಂದು ನನ್ನ ಭಯ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಂಬಂಧಪಟ್ಟವರೊಡನೆ ವ್ಯವಹರಿಸಿ ಒಂದು ಸೂಕ್ತ ರೀತಿಯಲ್ಲಿ ಪೀಸ್ ಕಮಿಟಿ ಮಾಡುವುದು ಸಮಂಜಸವಾದುದು. ಆದ್ದರಿಂದ ತೊಂದರೆಗಳನ್ನು ತಪ್ಪಿಸಲು ಪೀಸ್ ಕಮಿಟಿಯನ್ನು ಸೆಟಪ್ ಮಾಡುವ ವಿಚಾರವನ್ನು ನೋಡಬೇಕಾಗಿದೆ.

ಶ್ರೀ ಆರ್. ಗುಂಡೂರಾವ್:—ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಫೆರ್ನಾಂಡೀಸ್ ಹಾಗೂ ಕುಮಾರಿ ಪ್ರಮೀಳಾ ಅವರು ಏನು ಸಲಹೆ ಕೊಟ್ಟಿದ್ದಾರೆ ಅವನ್ನೆಲ್ಲಾ ವಿಚಾರ ಮಾಡುವುದಕ್ಕೆ ಎಲ್ಲಾ ಶಾಸಕರನ್ನೂ ಮತ್ತು ವಿದ್ಯಾರ್ಥಿನಾಯಕರನ್ನೂ, ಅಧಿಕಾರಿಗಳನ್ನು ಕರೆಸಿ ಸೂಕ್ತವಾದ ರೀತಿಯಲ್ಲಿ ತೀರ್ಮಾನ ಮಾಡಬೇಕಾಗುತ್ತದೆ. ಇದು ಕೇವಲ ಬೆಂಗಳೂರು ನಗರಕ್ಕೆ ಸೀಮಿತವಾಗಿರತಕ್ಕ ಪ್ರಶ್ನೆ ನಾಳೆದ್ದು ನಮ್ಮ ಪೌವರ್ ಮಿನಿಸ್ಟರ್ಸ್ ಕಾನ್‌ಫರೆನ್ಸ್ ಇರುವುದರಿಂದ ನಾನು ದೆಹಲಿಗೆ ಹೋಗುತ್ತಿದ್ದೇನೆ. ನಾನು ಅಲ್ಲಿನ ವಿದೇಶಾಂಗ ಮಂತ್ರಿಗಳ ಜೊತೆ ಈ ಬಗ್ಗೆ ಚರ್ಚೆ ಮಾಡಿ ಆ ನಂತರ ಏನು ಅಭಿಪ್ರಾಯಕ್ಕೆ ಬಂದಿವೆಯೆಂಬುದನ್ನು ಈ ಸದನಕ್ಕೆ ತಿಳಿಸುತ್ತೇನೆ.

ಶ್ರೀ ಪಿ. ಎಂ.

ಅಧ್ಯಕ್ಷರು —ಮಾನ್ಯ ಸದಸ್ಯರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಬಹಳ ಪ್ರಮುಖವಾಗಿ ಸಾರ್ವಜನಿಕರ ಕಾಂದುಕೊರತೆಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಶೂನ್ಯವೇಳೆ ಏಂದು ಇರತಕ್ಕಂಥದ್ದಾಗಿರುತ್ತದೆ. ಆಲ್ಲದೆ ಕಾಲಿಂಗ್ ಅಟೆಂಷನ್ ಮ್ಯಾಟರ್ ಅಂಡರ್ ರೂಲ್ ೫೧೨, ಇವೆಲ್ಲ ಕಾನೂನುಬದ್ಧವಾಗಿ ಒಂದೊಂದೇ ಹಾಕಬೇಕು. ಆದರೂ ಮೂರು ಗಂಟೆಯ ನಂತರ ಸೇರಿಯುವ ಸೂಚನೆ ಮತ್ತು ಎರಡು ಮ್ಯಾಟರ್ ಅಂಡರ್ ರೂಲ್ ೫೧೦ ಇವೆಲ್ಲವನ್ನೂ ಹಾಕಿದ್ದೇವೆ. ಮತ್ತೆ ಏನೆ ನೀವು ಅದನ್ನು ಹೇಳುತ್ತಿದ್ದರೆ ಕಾಲ ವ್ಯರ್ಥವಾಗುತ್ತದೆ. ಆಲ್ಲದೆ ಸಾರ್ವಜನಿಕರ ಕುಂದುಕೊರತೆಗಳನ್ನು ನಿವಾರಣೆ ಮಾಡಲು ಬಂದಿರತಕ್ಕಂಥ ತಮ್ಮ ಉದ್ದೇಶವೂ ಸಫಲವಾಗುವುದಿಲ್ಲ. ಅಂದ್ದೆನಾದರೂ ತಮಗೆ ಅನ್ಯಾಯವಾಗಿದ್ದರೆ ನನಗೆ ಮುಂಚಿತವಾಗಿಯೇ ತಿಳಿಸಿ, ಏನಾದರೂ ಲೋಪದೋಷಗಳಿದ್ದರೆ ಅದನ್ನು ಪರಿಹರಿಸುವುದಕ್ಕೆ ಪ್ರಯತ್ನ ಪಡುತ್ತೇನೆ.

Reinstatement of employees of ex-contract carriages

ಶ್ರೀ ಕೆ. ಎಂ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ ನಾನು ನೋಟೀಸ್ ಕೊಟ್ಟು ೧೫ ದಿವಸಗಳಾಗಿರುತ್ತದೆ. ಕಾಂಟ್ರಾಕ್ಟ್ ಕ್ಯಾರೇಜಸ್ ನೌಕರರು ಧರಣಿ ಸತ್ಯಾಗ್ರಹವನ್ನು ಮಾಡುತ್ತಿರುತ್ತಾರೆ. ಅವರ ಬಗ್ಗೆ ಇದುವರೆಗೂ ಸರ್ಕಾರದವರು ಯಾವ ನಿಗಾವನ್ನು ತೆಗೆದುಕೊಂಡಿಲ್ಲ. ಸರ್ಕಾರದವರು ಇದರ ಬಗ್ಗೆ ಹಿಂದೆ ಒಂದು ಸ್ಟೇಟ್‌ಮೆಂಟ್ ಮಾಡಿದ್ದು ಕಾಂಟ್ರಾಕ್ಟ್ ಕ್ಯಾರೇಜಸ್‌ನಲ್ಲಿ ಕೆಲಸ ಮಾಡುತ್ತಿದ್ದವರಂತ ಎಲ್ಲ ನೌಕರರನ್ನೂ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದನ್ನು ಸರ್ಕಾರದ ಜ್ಞಾಪಕಕ್ಕೆ ತರುತ್ತಾ ಧರಣಿ ಸತ್ಯಾಗ್ರಹ ಮಾಡುತ್ತಿರುವ ಕಾಂಟ್ರಾಕ್ಟ್ ಕ್ಯಾರೇಜಸ್ ನೌಕರರಬಗ್ಗೆ ನಿಗಾವಹಿಸಿ ಸೂಕ್ತ ಪರಿಹಾರವನ್ನು ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

Masstransfer of secretaries of Panchayats

ಶ್ರೀ ಶಫಿ ಅಹಮದ್.—ಮಾನ್ಯ ಅಧ್ಯಕ್ಷರೇ ತುಮಕೂರು ಜಿಲ್ಲೆಯಲ್ಲಿ ಸುಮಾರು ಎರಡು ತಿಂಗಳಿಂದ ೫೫ಜನ ಸೆಕ್ರೆಟರಿಯವರನ್ನು ಟ್ರಾನ್ಸ್‌ಫರ್ ಮಾಡಿರುತ್ತಾರೆ. ಇದನ್ನು ಸರ್ಕಾರದ ಗಮನಕ್ಕೆ ತಂದಾಗ ರವಿನ್ಯಾ ಮಂತ್ರಿಗಳು ಅವಕ್ಕೆ ತಡೆಯಾಜ್ಞೆಯನ್ನು ಜೊರಡಿಸಿದ್ದಾಗ್ಯೂ ಕೂಡ ದುರ್ದೈವವಿಗೂ ಅದು ಕಾರ್ಯಗತವಾಗಿಲ್ಲ. ದಯವಿಟ್ಟು ಇದನ್ನು ಸರ್ಕಾರದವರು ಗಮನಕ್ಕೆ ತೆಗೆದು

ಕೊಳ್ಳಬೇಕು. ಏತಕ್ಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ತೊಂದರೆಯಾಗುತ್ತಿದೆ. ಸೆಕ್ಕೆಟರಿಗಳು ಇಲ್ಲವಾದ ಕಾರಣ ಎರಡೂತಿಂಗಳಿಂದಲೂ ಕಂದಾಯ ವಗೈರೆ ಬರಬೇಕಾದುದ ವಸೂಲಾಗದೆ ಸರ್ಕಾರಕ್ಕೂ ನಷ್ಟ ಉಂಟಾಗುತ್ತಿದೆ. ಆದ್ದರಿಂದ ಈ ವಿಷಯವನ್ನು ಸರ್ಕಾರದವರು ಕೂಡಲೆ ಗಮನಕ್ಕೆ ತೆಗೆದು ಕೊಂಡು ಈ ಸಮಸ್ಯೆಯನ್ನು ಪರಿಹರಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಪಿ. ಮುದ್ಗಾಲ್. —ಮಾನ್ಯ ಅಧ್ಯಕ್ಷರೆ ನಾನ ೨೩೨ನೇ ಪ್ರಶ್ನೆಯನ್ನು ಕೇಳಿರುತ್ತೇನೆ. ಅದರಲ್ಲಿ ನನ್ನ ಹೆಸರನ್ನು ಪಿ ವಿ. ಮುದ್ಗಲ್ ಎಂದು ಇಂಗ್ಲೀಷ್‌ನಲ್ಲೂ ವಿ. ಪಿ. ಮುದ್ಗಾಲ್ ಎಂದು ಕನ್ನಡದಲ್ಲೂ ಅಚ್ಚಾಗಿರುವುದನ್ನು ನೋಡಿದರೆ, ರಾಮ ಎನ್ನುವ ಬದಲು ರಾವಣ ಎಂದು ಹಾಗಾಗಿರುತ್ತದೆ. ದಯವಿಟ್ಟು ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು. —ಕಾರ್ಯದರ್ಶಿಯವರು ಅದನ್ನು ಸರಿಪಡಿಸುತ್ತಾರೆ.

CALLING ATTENTION TO MATTERS OF URGENT PUBLIC IMPARTANCE

re : (i) Hardship caused to the employees of United Breweries and Indian Tobbacco Co., due to failure of the management to setttle Labour dispute.

SRI MICHAAL FERNANDES.— Sir. I beg to call the attention of the Minister for small Scale Industries, Labour and Food to the hardship caused to the employees of United Breweries and Indian Tobacco Company due to the failure of the Management to settle the labour dispute.

† SRI C. M. IBRAHIM (Minister for Small Scale Industries, Labour and Food).— I wish make the following Statement.

(೧) ಯುನೈಟೆಡ್ ಬ್ರಿವರಿಯಸ್, ಬೆಂಗಳೂರು :

ಬೆಂಗಳೂರು ಯುನೈಟೆಡ್ ಬ್ರಿಯರೀಸ್ ಕಾರ್ಖಾನೆಯಲ್ಲಿ ತಾರೀಖು ೪-೩-೧೯೮೦ ರಂದು ಮುಷ್ಕರವು, ಕಾರ್ಮಿಕ ಬೇಡಿಕೆಗಳ ಮೇಲೆ ಮತ್ತು ಒಬ್ಬ ಸೂಪರ್‌ವೈಸರ್ ಹಾಗೂ ಕೆಲವು ಕಾರ್ಮಿಕರ ನಡುವೆ ಸಂಭವಿಸಿದ ಘರ್ಷಣೆಯಿಂದ ಪ್ರಾರಂಭವಾಯಿತು. ತಾರೀಖು ೧-೪೧ ೧೯೮೦ ರಿಂದ ಕಾರ್ಖಾನೆಗೆ ಬೀಗಮುದ್ರೆ ಘೋಷಿಸಲಾಗಿತ್ತು. ಈ ಕಾರ್ಖಾನೆಯಲ್ಲಿ ೨೫೦ ಮಂದಿ ಕಾರ್ಮಿಕರು ಕೆಲಸ ಮಾಡುತ್ತಿರುತ್ತಾರೆ. ಕಾರ್ಮಿಕರಿಗೆ ಫೆಬ್ರುವರಿ ತಿಂಗಳ ಸಂಬಳವನ್ನು ಕೊಡಲಾಗಿದೆ.

ಮೇಲೆ ಹೇಳಿದ ಕಾರ್ಮಿಕರ ಬೇಡಿಕೆಗಳು ಹಾಗೂ ಘರ್ಷಣೆಯ ಬಗ್ಗೆ ಬೆಂಗಳೂರು ಎರಡನೇ ವಿಭಾಗದ ರಾಜೀ ಸಂಧಾನ ಹಾಗೂ ಕಾರ್ಮಿಕ ಕಮಿಷನರ್‌ರವರು ಸಂಧಾನ ನಡೆಸಿದರು. ಈ ಸಂಧಾನದ ಪರಿಣಾಮವಾಗಿ ತಾರೀಖು ೧೪-೪-೧೯೮೦ ರಂದು ಕೈಗಾರಿಕಾ ವಿವಾದ ಕಾನೂನಿನ ೧೨(೩)ನೇ ನಿಯಮದ ಪ್ರಕಾರ ವಿವಾದ ಇತ್ಯರ್ಥವಾಗಿ ಒಪ್ಪಂದಕ್ಕೆ ಸಹಿಯಾಗಿದೆ. ಬೆಂಗಳೂರು ಯುನೈಟೆಡ್ ಬ್ರುಯರೀಸ್‌ನ ಮಾಲೀಕರು ತಾರೀಖು ೧೫-೪-೧೯೮೦ ರಂದು ಬೆಳಿಗ್ಗೆ ೬ ಘಂಟೆಯಿಂದ ಬೀಗಮುದ್ರೆ ತೆರವು ಮಾಡಿದ್ದಾರೆ. ಮತ್ತು ಕಾರ್ಮಿಕರು ಮುಷ್ಕರವನ್ನು ಹಿಂತೆಗೆದುಕೊಂಡಂ ಕೆಲಸಕ್ಕೆ ಹಾಜರಾಗಿದ್ದಾರೆ.

(೨) ಐ. ಟಿ. ಪಿ. ಲಿಮಿಟೆಡ್, ಬೆಂಗಳೂರು :

ಐ. ಟಿ. ಪಿ. ಕಾರ್ಮಿಕ ವರ್ಗದ ಬೇಡಿಕೆಗಳ ಬಗ್ಗೆ ಬಹುಮತ ಪಡೆದ ಕಾರ್ಮಿಕ ಸಂಘದ ಪ್ರತಿನಿಧಿಗಳು ಮತ್ತು ಮೂಲೀಕರ ನಡುವೆ ಜಂಟಿ ಕಾರ್ಮಿಕ ಕಮಿಷನರ್‌ರವರ ಮುಂದೆ ತಾರೀಖು ೧೫-೩-೧೯೮೦ ರಂದು ಒಪ್ಪಂದಕ್ಕೆ ಬರಲಾಯಿತು. ಆ ಪ್ರಕಾರವಾಗಿ ತಾರೀಖು ೧೬-೩-೧೯೮೦ ರಂದು ಅದನ್ನು ಜಾರಿ